# ದಾರ್ಶನಿಕ ಲೇಖಕ, ‘ಮಾರ್ಗ’ ನಿರ್ಮಾಪಕ



**ಮೋಹನ ಕುಂಟಾರ್**

ಏಳು ದಶಕಗಳ ಕಾಲ ಮಲಯಾಳಂನ ಸಾಂಸ್ಕೃತಿಕ ಲೋಕದಲ್ಲಿ ಉಜ್ವಲ ತಾರೆಯಂತಿದ್ದ ಎಂ.ಟಿ. ವಾಸುದೇವನ್ ನಾಯರ್ ಅವರ ಕಥೆ–ಕಾದಂಬರಿಗಳ ತೇಜಸ್ಸಿಗೆ ಕನ್ನಡಿಗರೂ ಮಾರುಹೋದವರೇ. ಎಂ.ಟಿ. ಮೇರು ಬರಹಗಾರರಷ್ಟೇ ಅಲ್ಲ; ಸಾಹಿತ್ಯದ ಮೂಲಕ ಸಾಮಾಜಿಕ ವಿವೇಕವನ್ನು ರೂಪಿಸಿದ ‘ಮಾರ್ಗ’ಶಕ್ತಿಯೂ ಹೌದು.

ಎಂ.ಟಿ. ವಾಸುದೇವನ್ ನಾಯರ್ ಅಸ್ತಂಗತರಾಗುವ ಮೂಲಕ ಮಲಯಾಳಂ ಸಾಂಸ್ಕೃತಿಕ ಲೋಕದಲ್ಲಿ ಯುಗವೊಂದು ಅಂತ್ಯವಾಯಿತು ಎಂದೇ ಭಾವಿಸಬೇಕು. ಸುಮಾರು ಏಳು ದಶಕಗಳ ಕಾಲ ಸಾಹಿತ್ಯ, ಸಿನಿಮಾ ರಂಗಗಳಲ್ಲಿ ಅವರು ಮಾಡಿದ ನಿರಂತರ ಸಾಧನೆ ಅವಿಸ್ಮರಣೀಯವಾಗಿದೆ. ಹುಟ್ಟಿ ಬೆಳೆದ ನಿಳಾ ನದಿಯ ತೀರದ ಕುಡಲೂರು ಗ್ರಾಮದ ಹಿನ್ನೆಲೆಯಲ್ಲಿ ಹುಟ್ಟಿ ಬಂದ ಅನೇಕ ಕಥಾಪಾತ್ರಗಳು ಜಾಗತಿಕ ಮಟ್ಟದಲ್ಲಿ ಮಾನವೀಯ ಸಂವೇದನೆಗೆ ನಿಲುಕುವಂತೆ ಮಾಡಲು ಎಂ.ಟಿ. ವಾಸುದೇವನ್ ನಾಯರ್ ಲೇಖನಿ ಶಕ್ತವಾಯಿತು.

ಆಡಂಬರ, ಆಕ್ರೋಶಗಳ ಹಂಗಿಲ್ಲದೆ ಮೌನವಾಗಿಯೇ ಮಾನವರ ಅಂತರಂಗವನ್ನು ತೆರೆದಿಡಬಲ್ಲ ಧೀಶಕ್ತಿ ಅವರ ಬರವಣಿಗೆಗೆ ಇದೆ. ತಮ್ಮೂರಿನ, ತಮ್ಮ ಬಾಲ್ಯ ಕಾಲದ ನೆನಪುಗಳನ್ನು ಕಥೆಯಾಗಿ ಮರುಕಟ್ಟುವ ಕಥನ ಕ್ರಿಯೆ ಎಂ.ಟಿ. ಅವರಿಗೆ ಸಿದ್ಧಿಸಿತ್ತು. ನಾಲ್ಕು ಸುತ್ತಿನ ಮನೆಯ ಒಳಗಿನ ಬದುಕಿನಲ್ಲಿ ಕಂಡ ಬಡತನ, ನೋವು, ನಲಿವು, ಅವಮಾನ, ಪ್ರತಿರೋಧಗಳನ್ನೇ ಮಾನವೀಯ ಅಂತಃಕರಣದಿಂದ ಅಕ್ಷರ ರೂಪಕ್ಕೆ ಇಳಿಸಿದ ಅವರು ಸಾಮಾನ್ಯ ಓದುಗರ ಹೃದಯದಲ್ಲಿ ಅಚ್ಚಳಿಯದ ಗುರುತುಗಳನ್ನು ಮೂಡಿಸಿದರು. ಪರಂಪರಾಗತ ನಾಯರ್ ಮನೆತನಗಳಲ್ಲಿ ನಡೆಯುತ್ತಿದ್ದ ಶೋಷಣೆ, ಹಿರಿಯರಾದವರ ಅಮಾನವೀಯ ನಡವಳಿಕೆ ಮನೆಯ ಮಕ್ಕಳಲ್ಲಿ, ಮಹಿಳೆಯರಲ್ಲಿ ಹುಟ್ಟು ಹಾಕಿದ ನೋವು, ಆತಂಕ, ಭಯಗಳ ಸೂಕ್ಷ್ಮಗಳನ್ನು ಅಕ್ಷರ ರೂಪದಲ್ಲಿ ಚಿತ್ರಿಸಿದ ಎಂ.ಟಿ. ನಾಯರ್‌ರವರ ಪ್ರತಿಭೆ ಅನುಪಮವಾದುದು. ಕಥಾಪಾತ್ರಗಳ ನೋವನ್ನು ಓದುಗರ ಹೃದಯಕ್ಕೂ ದಾಟಿಸುವ ಎಂ.ಟಿ.ಯವರ ಬರವಣಿಗೆಗೊಂದು ಅದಮ್ಯ ಶಕ್ತಿಯಿದೆ.

ಸಣ್ಣಕಥೆ, ಕಾದಂಬರಿ, ಚಿತ್ರಸಾಹಿತ್ಯ ಅಲ್ಲದೆ